ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಮೇಲಿನಂತೆ ಗಮನಿಸಿರುವ ಅಂಶವನ್ನು ಪರಿಗಣಿಸಿ, ಯಾವುದೇ ಅಮಾಯಕ ವ್ಯಕ್ತಿಯ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವಂತಹ ಸನ್ನಿವೇಶ ಉದ್ಭವಿಸದಂತೆ ಕ್ರಮ ಕೈಗೊಳ್ಳುವುದು ಅಗತ್ಯವಾಗಿರುತ್ತದೆ. ಆದ್ದರಿಂದ ಯಾವುದೇ ವ್ಯಕ್ತಿ (ಹೆಂಗಸು, ಗಂಡಸು ಮತ್ತು ಮಕ್ಕಳು ಯಾರನ್ನೇ) ಗಳನ್ನು ಮೇಲೆ ನಮೂದಿಸಿದ ಕಾನೂನಿನಡಿ ದಸ್ತಗಿರಿ ಮಾಡಬೇಕಾದಲ್ಲಿ ಪ್ರಕರಣದ ತನಿಖಾ ದಾಖಲಾತಿಗಳನ್ನು, ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ /ಡೆಪ್ಯೂಟಿ ಕಮಿಷನರ್ ಆಫ್ ಪೊಲೀಸ್ ರವರುಗಳು ಪರಿವೀಕ್ಷಣೆ ನಡೆಸಿ, ಅನುಮತಿ ನೀಡಿದ ನಂತರ ದಸ್ತಗಿರಿ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಸಂಬಂಧಪಟ್ಟ ತನಿಖಾಧಿಕಾರಿಗಳು ಸಂಗ್ರಹಿಸಿದ ನೈಜದಾಖಲೆಗಳು ಮತ್ತು ಸ್ಪಷ್ಟ ಸಾಕ್ಷ್ಯಾಧಾರಗಳನ್ನೊಳಗೊಂಡಂತೆ ಪ್ರಕರಣದ ಕಡತವನ್ನು ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಆಫ್ ಪೊಲೀಸ್/ಡೆಪ್ಯೂಟಿ ಕಮಿಷನರ್ ಆಫ್ ಪೊಲೀಸ್ ರವರಿಗೆ ಪರಿಶೀಲನೆಗಾಗಿ ಕಳುಹಿಸಬೇಕು. ಅವರುಗಳು ಪ್ರತಿಯೊಬ್ಬ ಆರೋಪಿಯ ವಿರುದ್ಧದ ಆಪಾದನೆಯ ತೀವ್ರತೆಯನ್ನು ತುಲನಾತ್ಮಕವಾಗಿ ಪರಿಶೀಲಿಸಿ, ದಸ್ತಗಿರಿ ಮಾಡುವ ಅವಶ್ಯಕತೆ ಇದ್ದಲ್ಲಿ ಅದನ್ನು ಪರಿಗಣಿಸಿ, ಅನುಮತಿಯನ್ನು ನೀಡಿದ ನಂತರವೇ, ದಸ್ತಗಿರಿ ಮಾಡುವುದು ಸೂಕ್ತ.

ಸಾಧ್ಯವಾದ ಎಲ್ಲಾ ಇಂತಹ ಪ್ರಕರಣಗಳಲ್ಲಿ, ಈ ಸೂಚನೆಗಳ ಪಾಲನೆಯನ್ನು ಎಲ್ಲಾ ಮೇಲ್ವಿಚಾರಣಾಧಿಕಾರಿಗಳು ಗಮನಿಸಬೇಕಾಗಿದೆ.

1.10.10

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್<br>ಜನರಲ್ ಆಫ್ ಪೊಲೀಸ್

ಗೆ,

1) ಎಲ್ಲಾ ಪೊಲೀಸ್ ಆಯುಕ್ತರುಗಳು (ಹೆಸರಿನಲ್ಲಿ)
2) ಎಲ್ಲಾ ಪೊಲೀಸ್ ಅಧೀಕ್ಷಕರುಗಳು ಕೆ.ಜಿ.ಎಫ್ ಮತ್ತು ರೈಲ್ವೇಸ್ ಸೇರಿದಂತೆ (ಹೆಸರಿನಲ್ಲಿ)

<u>ಪ್ರತಿ:</u>
ಎಲ್ಲಾ ವಲಯ ಪೊಲೀಸ್ ಮಹಾ ನಿರೀಕ್ಷಕರುಗಳು.

ರವಾನಿಸಲಾಗಿದೆ
04 OCT 2010
ಸಹಿ............